ಶ್ರೀ ವಾಟಾಳ್ ನಾಗರಾಜ್:– ಸ್ವಾಮಿ ಈ ಸದನವನ್ನು ವರ್ಷದಲ್ಲಿ ಎಷ್ಟು ದಿವಸ ಕರೆಯಬೇಕೆಂಬ ಬಗ್ಗೆ ಒಂದು ಚರ್ಚೆಯಾಗಿದೆ. ತಾವೂ 100 ದಿವಸ ನಡೆಯಬೇಕೆಂಬುದು ಮತ್ತು ಮುಖ್ಯಮಂತ್ರಿಗಳೂ 100 ದಿವಸ ವರ್ಷದಲ್ಲಿ ಇರಬೇಕೆಂಬುದು. ಆದರ ಬಗ್ಗೆ ಸದನದಲ್ಲಿ ಮುಖ್ಯಮಂತ್ರಿಗಳು ಏನೂ ಪ್ರಕಟಣೆ ಮಾಡಲಿಲ್ಲ. ನಾನು ತಮ್ಮ ಮೂಲಕ ಅವರನ್ನು ಕೇಳುತ್ತಿದ್ದೇನೆ ಆದೆಷ್ಟು ದಿವಸ ನಡೆಯಬೇಕು ಹೇಗೆ ಎಂಬ ಬಗ್ಗೆ ಅವರು ಹೇಳಬೇಕು. 100 ದಿನ ಆಗಿರಬೇಕೆಂಬುದು ತಮ್ಮ ಅಭಿಪ್ರಾಯವಿದೆ, ನಮ್ಮ ಅಭಿಪ್ರಾಯವೂ ಇದೆ. ಮತ್ತು ಅಧ್ಯಕ್ಷರ ಸಮ್ಮೇಳನದಲ್ಲೂ ಕೂಡ ಇದೆ. ಈಗಿನ ಮುಖ್ಯಮಂತ್ರಿಗಳೂ ಕೂಡ ಆ ನೀತಿ ಒಪ್ಪಿಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ಅದನ್ನು ತಿಳಿಸಬೇಕು. ಇತ್ತೀಚಿನ ದಿನಗಳಲ್ಲಿ ಶಾಸನಸಭೆಯ ನಡವಳಿಕೆಗಳು ಬಹಳ ಕಡಿಮೆಯಾಗುತ್ತಿದೆ, ಆದು ಒಳ್ಳೆಯದಲ್ಲ ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇವೆ, ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಸಿ. ಬೈರೇಗೌಡ:– ಕಾರ್ಯಕಲಾಪ ಸಲಹಾ ಸಭೆಯಲ್ಲೂ ಆದು ಚರ್ಚೆಯಾಗಿ ನಾವೊಂದು ಅಭಿಪ್ರಾಯಕ್ಕೆ ಬಂದಿದ್ದೇವೆ, ಸರ್ಕಾರ ಆದರ ಬಗ್ಗೆ ಹೇಳಿದರೆ ಸೂಕ್ತ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸಭಾಧ್ಯಕ್ಷರೇ, ನಾವು ಮಾತನಾಡಿದ ಹಾಗೆ ಸುಮಾರು 80 ದಿವಸ ಮುಂದೆ ಬರುವ ದಿನಗಳಲ್ಲಿ ಸದನ ಸೇರಬೇಕು ಎಂದು, ಆದರಲ್ಲಿ ಮೂರು ವಿಭಾಗ, ಬಜೆಟ್ ಸೆಶನ್, ಬೇಸಿಗೆ ಕಾಲ ಮತ್ತು ಚಳಿಗಾಲದ ಅಧಿವೇಶನ ಎಂದು ಮೂರು ವಿಭಾಗ ಮಾಡಿದ್ದೇವೆ. ತಮ್ಮ ಜೊತೆ ಮಾತನಾಡಿದ ಪ್ರಕಾರ ತಾರೀಖಿನ್ನು ನಿಷ್ಕರ್ಷ ಮಾಡುವುದು ಬೇಡ. ಒಟ್ಟು 80 ದಿವಸಗಳಲ್ಲಿ ಸದನವನ್ನು 3 ವಿಭಾಗ ಮಾಡಿ ನಡೆಸಬೇಕೆಂಬ ವಿಚಾರದಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ.

ಅಧ್ಯಕ್ಷರು:– ಕಳೆದ 15 ದಿವಸಗಳಿಂದ ನಡೆದಿರುವ ಈ ಸದನದಲ್ಲಿ ಸಹಕರಿಸಿದ ತಮಗೆಲ್ಲರಿಗೂ ನನ್ನ ಧನ್ಯವಾದಗಳು. ವಿಶೇಷವಾಗಿ ಹೊಸ ಮುಖ್ಯಮಂತ್ರಿಗಳು ಹೊಸ ವಿರೋಧಪಕ್ಷದ ನಾಯಕರು ಮತ್ತು ಸದನ ಪ್ರಾರಂಭವಾದಾಗ ನಾನಿಲ್ಲದೇ ಇದ್ದುದು ಇವುಗಳೆಲ್ಲವೂ ಈ ಅಧಿವೇಶನದ ವಿಶೇಷ ಬೆಂಚ್‌ಮಾರ್ಕ್ಸ್ ಆಗಿದೆ. ಆದರೂ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು, ಉಪಾಧ್ಯಕ್ಷಿಣಿಯವರು ಬಹಳ ದಕ್ಷತೆಯಿಂದ ಈ ಸದನ ನಡೆಸಿದ್ದಕ್ಕಾಗಿ ಅವರ ಬಗ್ಗೆ ನನ್ನ ಮೆಚ್ಚುಗೆ ಧನ್ಯವಾದಗಳನ್ನು ನಾನು ವ್ಯಕ್ತಪಡಿಸಿ ಮತ್ತು ಕೆಲವು ಬಾರಿ ತಡವಾಗಿ ಕುಳಿತಾಗಲೂ ಕೂಡ ನಮ್ಮ ಪತ್ರಕರ್ತ ಸ್ನೇಹಿತರು, ಅಧಿಕಾರಿ ಸ್ನೇಹಿತರು ಎಲ್ಲರೂ ಸಹಕಾರ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಮ್ಮ ಧನ್ಯವಾದಗಳನ್ನು ಸಮರ್ಪಣೆ ಮಾಡಿ ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೆ ಹಾಕುತ್ತೇನೆ.

(ಸದನವು ರಾತ್ರಿ 10 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)